ಬಿಡುಗಡೆಯಾಗಿದ್ದರೂ ಕಟ್ಟಡದ ನಿರ್ಮಾಣ ಕಾರ್ಯ ಇನ್ನೂ ಕೈಗೆತ್ತಿಕೊಳ್ಳದಿರಲು ಕಾರಣವೇನು? ಈ ಕಟ್ಟಡ ನಿರ್ಮಾಣ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ?

ಅ) ಹಾಗಿದ್ದಲ್ಲಿ ಯಾವಾಗ ನಿರ್ಮಾಣ ಮಾಡಲಾಗುವುದು, ಮತ್ತು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು) :

ಅ) ಈ ಬಗ್ಗೆ ಶಿಕ್ಷಣ ಇಲಾಖೆಯಿಂದ ಯಾವುದೇ ಆದೇಶ ಹೊರಡಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಕೆ.ಜಿ.ಎಫ್ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿದ್ಯಾರ್ಥಿ ವೇತನದ ವಿವರಣೆಯಲ್ಲಿ ಅವ್ಯವಹಾರ.

1629- ಶ್ರೀ ಎಸ್. ರಾಜೇಂದ್ರನ್ (ಕೆಜಿಎಫ್) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಜಿ.ಎಫ್ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಣ ದುರುಪಯೋಗ ಮಾಡಿರುವ ಬಗ್ಗೆ ಹಾಗೂ ಪರಿಶಿಷ್ಟ ಜಾತಿ: ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿ ವೇತನದ ವಿತರಣೆಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ವಿಚಾರಣೆ ನಡೆಸಿರುವುದು ನಿಜವೇ?

ಆ) ಹಾಗಿದ್ದಲ್ಲಿ ವಿಚಾರಣೆ ಯಾವ ಹಂತದಲ್ಲಿದೆ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿ ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು) :

ಅ) ಹೌದು.

ಆ) ವರದಿಯ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ಕಾಲೇಜು ಶಿಕ್ಷಣ ಆಯುಕ್ತರವರಿಗೆ ನಿರ್ದೇಶಿಸಲಾಗಿದೆ.

ಮಂಗನಕಾಯಿಲೆ ಕ್ಯಾಸನೂರು ಅರಣ್ಯರೋಗ ತಗುಲಿದವರ ಸಂಖ್ಯೆ.

1636- ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕ್ಯಾಸನೂರು ಅರಣ್ಯ ರೋಗ (ಮಂಗನ ಕಾಯಿಲೆ) ತಗುಲಿದವರ ಸಂಖ್ಯೆ ಎಷ್ಟು; ಹಾಗೂ ಸತ್ತವರ ಸಂಖ್ಯೆ ಎಷ್ಟು?

ಆ) ಈ ರೋಗ ನಿವಾರಣೆಗಾಗಿ ಕಳೆದ ಮೂರು ಸಾಲುಗಳಲ್ಲಿ ವ್ಯಯ ಮಾಡಿದ ಹಣವೆಷ್ಟು? ಮತ್ತು ಈ ರೋಗವನ್ನು ತಡೆಯಲು ಇಲಾಖೆಯು ತೆಗೆದುಕೊಂಡ ಮುಂಜಾಗ್ರತೆ ಕ್ರಮಗಳೇನು?

ಇ) ಈ ರೋಗದಿಂದ ನರಳುವವರಿಗೆ ಹಾಗೂ ಸತ್ತವರಿಗೆ ಪರಿಹಾರವೇನಾದರೂ ಕೊಡಲಾಗಿದೆಯೇ?

ಈ) ಹಾಗಿದ್ದಲ್ಲಿ, ತಲಾ ನೀಡಿದ ಪರಿಹಾರದ ಹಣವೆಷ್ಟು ಮತ್ತು ಇದುವರೆವಿಗೆ ಎಷ್ಟು ಜನರಿಗೆ ಪರಿಹಾರ ಕೊಡಲಾಗಿದೆ? (ಕಳೆದ 3 ವರ್ಷಗಳ ಮಾಹಿತಿ ಒದಗಿಸುವುದು)

ಉ) ಮಂಗನ ಕಾಯಿಲೆ ನಿವಾರಿಸಲು ಲಸಿಕೆ (ವ್ಯಾಕ್ಸಿನ್) ತಯಾರರು ಮಾಡುವ ಘಟಕವನ್ನು ಶಿವಮೊಗ್ಗದಲ್ಲಿ ಪ್ರಾರಂಭಿಸಲಾಗಿದೆಯೇ?

ಊ) ಹಾಗೂ ಕೆಲಸವು ಈಗ ಯಾವ ಹಂತದಲ್ಲಿದೆ?

ಋ) ಇದಕ್ಕಾಗಿ ಇಲ್ಲಿಯವರೆಗೆ ತಗುಲಿದ ವೆಚ್ಚವೆಷ್ಟು?

ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ರೋಗ ತಗುಲಿದವರ ಸಂಖ್ಯೆ.5915 (1957 ರಿಂದ) ಸತ್ತವರ ಸಂಖ್ಯೆ 463 (1957ರಿಂದ)

ಆ) ಕಳೆದ ಮೂರು ಸಾಲುಗಳಲ್ಲಿ

1994-95 ರೂ. 43,33,308-00

1995-96 ರೂ. 48, 47, 856-00

1996-97 ರೂ. 54, 57, 196-00

ಈ ರೋಗವನ್ನು ತಡೆಯಲು ಇಲಾಖೆಯು ತೆಗೆದುಕೊಂಡ ಮುಂಜಾಗ್ರತಾ ಕ್ರಮಗಳು ಈ ಕೆಳಗಿನಂತಿವೆ:

1. ಕೆ.ಎಫ್.ಡಿ. ಲಸಿಕೆ ಕಾರ್ಯಕ್ರಮ.
2. ಜಾನುವಾರುಗಳಲ್ಲಿ ಉಣ್ಣೆ ನಿಯಂತ್ರಣ, ಉಣ್ಣೆಗಳು ಇರುವ ಸ್ಥಳಗಳಲ್ಲಿ (ಪ್ರದೇಶಗಳಲ್ಲಿ) ಉಣ್ಣೆ ನಾಶಕಗಳಾದ ಶೇ.50 ಬಿಹೆಚ್‌ಸಿ ಪುಡಿಯನ್ನು ಸಿಂಪಡಿಸುವ ಕಾರ್ಯಕ್ರಮವನ್ನು ಜೂನ್ 97ರವರೆಗೆ ನಡೆಸಲಾಗಿತ್ತು. ಅನಂತರ ಕೇಂದ್ರ ಸರ್ಕಾರದ ಆದೇಶದ ಮೇರೆಗೆ ಶೇ. 50 ಬಿಹೆಚ್‌ಸಿ ಪುಡಿಯನ್ನು ಸಿಂಪಡಿಸುವ ಕಾರ್ಯಕ್ರಮ ನಿಲ್ಲಿಸಲಾಗಿತ್ತು.
3. ಇತರೆ ಇಲಾಖೆಗಳಾದ ಅರಣ್ಯ, ಶಿಕ್ಷಣ ಮತ್ತು ಕಂದಾಯ ಇಲಾಖೆಯ ಸಹಾಯದೊಂದಿಗೆ ಮಂಗನ ಕಾಯಿಲೆ ಹರಡದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಲು ಸಾರ್ವಜನಿಕರಿಗೆ ಕರಪತ್ರಗಳ ಮೂಲಕ ಸೂಕ್ತ ತಿಳುವಳಿಕೆ ನೀಡುವುದು.
4. ಸಾರ್ವಜನಿಕರಿಗೆ ಈ ಕಾಯಿಲೆ ಬರದಂತೆ ನೋಡಿಕೊಳ್ಳುವ ಬಗ್ಗೆ ಆರೋಗ್ಯ ಶಿಕ್ಷಣ ನೀಡಲಾಗುತ್ತಿದೆ.
5. ಮಂಗನ ಕಾಯಿಲೆಗೆ ಸಂಬಂಧಪಟ್ಟ ಔಷಧಿ ವಿತರಣಾ ಕಾರ್ಯಕ್ರಮಗಳು.

6. ಕೀಟನಾಶಕ ರಾಸಾಯನಿಕಗಳಿಂದ ಉಣ್ಣೆಗಳ ನಿಯಂತ್ರಣ "ಮೈಲಾಲ್" ಮತ್ತು "ಮಾಸ್‌ಸ್ಕಾಟ್" ದ್ರಾವಣಗಳ ವಿತರಣೆ.

ಇ) ಇಲ್ಲ. ಆದರೆ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ.

ಈ) ಇಲ್ಲ.

ಉ) ಹೌದು.

ಊ) ಕಾರ್ಯ ರೂಪದಲ್ಲಿದೆ.

ಋ) ಇದಕ್ಕಾಗಿ ಇಲ್ಲಿಯವರೆಗೆ ಮಾಡಿರುವ ವೆಚ್ಚ ರೂ. 57,19,777-00.

ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ.

1639 - ಶ್ರೀ ವಿಶ್ವೇಶ್ವರ ಹೆಗ್ಗಡೆ ಕಾಗೇರಿ (ಅಂಕೋಲಾ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕುಡಿಯುವ ನೀರಿನ ಬಗ್ಗೆ ಯಾವ ಯಾವ ಜಿಲ್ಲೆಗಳಲ್ಲಿ ತೊಂದರೆಯಿದೆ (ವಿವರವಾದ ಮಾಹಿತಿ);

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ತೊಂದರೆಯಿದೆ; (ವಿವರವಾದ ಮಾಹಿತಿ);

ಇ) ಅಂಕೋಲಾ ಮತದಾರ ಕ್ಷೇತ್ರದ ಅಂಕೋಲಾ-ಸಿರ್ಸಿ-ಯಲ್ಲಾಪುರ ತಾಲ್ಲೂಕಿನಲ್ಲಿ ಯಾವ ಯಾವ ಮಜರೆಗಳಲ್ಲಿ ನೀರಿನ ತೊಂದರೆಯಿದೆ; (ಮಜರೆ ವಿವರ);

ಈ) ಆಯಾ ಆಯಾ ಮಜರೆಗಳಲ್ಲಿ ನೀರಿನ ಸಮಸ್ಯೆ ಪರಿಹರಿಸಲು ಗ್ರಾಮಪಂಚಾಯಿತಿಯಿಂದ ವರದಿ ತರಿಸಿಕೊಂಡಿದೆಯೇ?

ಉ) ತೆರೆದಬಾವಿ, ಬೋರ್‌ವೆಲ್ ತೆಗೆಯುವಾಗ ಸದರಿ ಗ್ರಾಮ ಪಂಚಾಯತಿಯನ್ನು ಸಂಪರ್ಕಿಸದೇ ಇರಲು ಕಾರಣವೇನು?

ಊ) ಬೋರ್‌ವೆಲ್ ತೆರೆದಬಾವಿ ರಿಪೇರಿ ಇಲ್ಲದೆ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಳ್ಳುತ್ತಿದೆ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ರಾಜ್ಯದ ಪ್ರತಿಯೊಂದು ಕಂದಾಯ ಗ್ರಾಮಕ್ಕೂ ಕನಿಷ್ಟ ಒಂದು ಸುರಕ್ಷಿತ ಕುಡಿಯುವ ನೀರಿನ ಮೂಲವನ್ನು ಒದಗಿಸಲಾಗಿದೆ. ಆದಾಗ್ಯೂ ಪ್ರತಿ ಜಿಲ್ಲೆಯ ಕೆಲವೊಂದು ಗ್ರಾಮೀಣ ಪ್ರದೇಶಗಳಲ್ಲಿ ನೀರಿನ ತೊಂದರೆಯಿರುತ್ತದೆ.